ವಾರ್ಡ್ ಮಟ್ಟದ ಲೋಕೋಪಯೋಗಿ ಕಾಮಗಾರಿ, ನಗರ ಯೋಜನೆ ಹಾಗೂ ಮೂಲ ಸೌಕರ್ಯ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರವನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:19-01-2024ರ ನಡವಳಿಗಳು

ವಿಷಯ ಸಂಖ್ಯೆ:158/2023-24

ಪ್ರಸ್ತಾವನೆ :

ಟಿಪ್ಪಣಿಯಲ್ಲಿ ವಿವರಿಸಿರುವಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಯಲಹಂಕ ವಲಯ ವ್ಯಾಪ್ತಿಯಲ್ಲಿ ಬರುವ ಯಲಹಂಕ ವಿಧಾನ ಸಭಾಕ್ಷೇತ್ರದಲ್ಲಿ 110 ಹಳ್ಳಿಗಳ ಪೈಕಿ ಒಟ್ಟು 9 ಹಳ್ಳಿಗಳು ಸೇರಿದ್ದು, ಅದರಲ್ಲಿ ಗೋವಿಂದಪುರ ಹಾಗೂ ವಡೇರಪುರ ಹಳ್ಳಿಗಳಲ್ಲಿ ಇನ್ನು ಜನವಸತಿ ಇಲ್ಲದೇ ಇದ್ದು, ಉಳಿದ 7 ಹಳ್ಳಿಗಳಲ್ಲಿ ಇನ್ನೂ ಬಿ.ಡಬ್ಲ್ಯೂ.ಎಸ್.ಎಸ್.ಬಿ ವತಿಯಿಂದ ಶುದ್ಧ ಕುಡಿಯುವ ನೀರಿನ ಸರಬರಾಜು ಪ್ರಾರಂಭವಾಗದ ಕಾರಣ ಸದರಿ ಪ್ರದೇಶಗಳಲ್ಲಿ ಬಿ.ಬಿ.ಎಂ.ಪಿ ವತಿಯಿಂದ ಕೊಳವೆ ಭಾವಿಗಳ ಮೂಲಕ ನೀರು ಸರಬರಾಜು ಮಾಡಲಾಗುತ್ತಿದ್ದು, ಹಾಲಿ ಕೊಳವೆ ಭಾವಿಗಳಲ್ಲಿ ನೀರಿನ ಇಳುವರಿ ಕಡಿಮೆಯಾಗುತ್ತಿರುವುದರಿಂದ ಹಾಗೂ ಸದರಿ ಪ್ರದೇಶಗಳಲ್ಲಿ ಅನೇಕ ಮನೆಗಳು ಹೊಸದಾಗಿ ನಿರ್ಮಾಣಗೊಂಡಿರುವುದರಿಂದ ಹಾಲಿ ಕಾರ್ಯನಿರ್ವಹಿಸುತ್ತಿರುವ ಬೊರ್‌ವೆಲ್‌ಗಳ ಮುಖಾಂತರ ಕುಡಿಯುವ ನೀರು ಸರಬರಾಜು ಮಾಡುವುದು ಕಷ್ಟಕರವಾಗಿರುತ್ತದೆ ಹಾಗೂ ದಿನಾಂಕ:16-08-2023 ರಂದು ಅನುಮೋದನೆ ನೀಡಿರುವ ಕ್ರಿಯಾ ಯೋಜನೆಯಲ್ಲಿ ಯಲಹಂಕ ವಿಭಾಗಕ್ಕೆ ಒಳಪಡುವ ವಾರ್ಡ್‌ಗಳಲ್ಲಿ ಟ್ಯಾಂಕರ್ ಮುಖಾಂತರ ನೀರು ಕುಡಿಯುವ ನೀರು ಸರಬರಾಜು ಮಾಡಲು ರೂ.9.75 ಲಕ್ಷಗಳ ಅನುಮೋದನೆ ದೊರೆತಿರುತ್ತದೆ.

ಈ ಹಿನ್ನಲೆಯಲ್ಲಿ ಸಾರ್ವಜನಿಕ ಹಿತದೃಷ್ಟಿಯಿಂದ ಸಾರ್ವಜನಿಕರಿಗೆ ಯಾವುದೇ ರೀತಿಯ ಕುಡಿಯುವ ನೀರಿಗೆ ತೊಂದರೆ ಉಂಟಾಗದಂತೆ ನೀರಿನ ಸರಬರಾಜು ಮಾಡಲು ಕೊಳವೆ ಭಾವಿಗಳನ್ನು ಕೊರೆಸಲು ಕಾರ್ಯಪಾಲಕ ಅಭಿಯಂತರರು ಯಲಹಂಕ ವಿಭಾಗರವರು ಈ ಕೆಳಕಂಡಂತೆ ಕ್ರೀಯ ಯೋಜನೆ ತಯಾಸಿರುತ್ತಾರೆ.

ಪ್ರಸ್ತುತ 110 ಹಳ್ಳಿಗಳ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬೊರ್‌ವೆಲ್‌ಗಳ ವಿವರ ಈ ಕೆಳಕಂಡಂತಿದೆ.

Sl No	Ward No. and Name	110 Villages are Name	No of Borewell Working	Present No of Water Tanker Supply per Day	Action Plan (required Borewell)
1	01-Kempegowda	Srinivasapura	9	-	2
2	02-Chowdeshwari	Harohalli	17	-	2
		Kenchenahalli	13	-	2
		Nagenahalli	15	-	2
3	03-Attur	Chikkabettahalli	78	-	5
		Doddabettahalli	9	-	2
		Ananthapura	25	-	2
			166	-	17

ಮೇಲಿನ ಕೊಷ್ಟಕದಂತೆ ಈ ಕೆಳಕಂಡ ಕಾಮಗಾರಿಗಳ ಕ್ರೀಯಾ ಯೋಜನೆ ತಯಾರಿಸಿದೆ.

Sl. No	Ward No & Name	Villages	Name of Work	Est. Amount in Lakhs
1	01-Kempegowda	Srinivasapura	Drilling of Borewell and Erection of Pumpset, Electrification to Borewell at Srinivasapura village area in ward no -01 of yelahanka Sub division.	20.00
2	02-Choewdeshwari	Nagenahalli, Harohalli, Kenchenahalli	Drilling of Borewell and Erection of Pumpset, Electrification to Borewell at Nagenahalli, Harohalli, Kenchenahalli village areas in ward no -02 of yelahanka Sub division.	50.00
3	03-Attur	Chikkabettahalli, doddabettahalli and Ananthapura	Drilling of Borewell and Erection of Pumpset, Electrification to Borewell at Chikkabettahalli, Doddabettahalli and ananthapura village areas in Attur ward no -03 of yelahanka Satellite town sub division.	80.00
		Total		150.00

ಮೇಲ್ಕಂಡ ಪ್ರಸ್ತಾವನೆಗೆ ಮಾನ್ಯ ಆಡಳಿತಗಾರರು ಬಿ.ಬಿ.ಎಂ.ಪಿ ರವರು ವಿಷಯದ ಸಂಖ್ಯೆ 108/2023-24 ದಿನಾಂಕ: 27-11-2023 ರಂದು ಅನುಮೋದನೆ ನೀಡಿರುತ್ತಾರೆ. ಆದರೆ ಕರ್ನಾಟಕ ರಾಜ್ಯಪತ್ರ ಅಧಿಕೃತವಾಗಿ ಪ್ರಕಟಿಸಲಾಗಿರುವ ಅಧಿಸೂಚನೆ ಸಂಖ್ಯೆ ನ.ಅ.ಇ 17 ಬಿ.ಬಿ.ಎಲ್ 2020 (ಇ) ದಿನಾಂಕ: 25-09-2023 ರ ಹಾಗೂ 30-09-2023ರ ತಿದ್ದುಪಡಿ ಅಧಿಸೂಚನೆ ಪ್ರಕಾರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿನಿಯಮ 2020ರ ಕಲಂ 7ರಲ್ಲಿ ಪ್ರದತ್ತವಾದ ಅಧಕಾರವನ್ನು ಚಲಾಯಿಸಿ, ಬಿ.ಬಿ.ಎಂ.ಪಿ 225 ವಾರ್ಡ್‌ವಾರು ಕ್ಷೇತ್ರ ಪುನರ್ ವಿಂಗಡಣೆಯ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ. ಅದರಂತೆ ಸದರಿ ಅಧೀಸೂಚನೆಯಲ್ಲಿ ಈ ಹಿಂದೆ ನಮೂದಿಸಿದ್ದ ವಾರ್ಡ್‌ಗಳ 110 ಹಳ್ಳಿಗಳ ಪ್ರದೇಶಗಳು ಬದಲಾವಣೆಯಾಗಿರುತ್ತವೆ. ವಿವರ ಈ ಕೆಳಕಂಡಂತಿದೆ.

ಕ್ರ.ಸಂ	ವಾರ್ಡ ಸಂಖ್ಯೆ / ಹೆಸರು	110 ಹಳ್ಳಿಗಳ ಹೆಸರು
01	01-ಕೆಂಪೇಗೌಡ	ಕೆಂಚೇನಹಳ್ಳಿ
		ಹಾರೋಹಳ್ಳಿ
02	02-ಚೌಡೇಶ್ವರಿ	ನಾಗೇನಹಳ್ಳಿ
03	03-ಅಟ್ಟೂರು	-
		ಚಿಕ್ಕಬೆಟ್ಟಹಳ್ಳಿ
		ದೊಡ್ಡಬೆಟ್ಟಹಳ್ಳಿ
		ಅನಂತಪುರ

ಈ ಮೇಲ್ಕಂಡ ಅಧಿಸೂಚನೆ ಪ್ರಕಾರ ಈ ಹಿಂದೆ ವಾರ್ಡ್ ನಂ-01ರಲ್ಲಿದ್ದ ಶ್ರೀನಿವಾಸಪುರ ಗ್ರಾಮವನ್ನು ವಾರ್ಡ್ -05ಕ್ಕೆ ಬದಲಾಯಿಸಿದ್ದು, ವಾರ್ಡ್ ನಂ-02ರಲ್ಲಿದ್ದ ಕೆಂಚೇನಹಳ್ಳಿ, ಹಾರೋಹಳ್ಳಿ ಮತ್ತು ನಾಗೇನಹಳ್ಳಿ ಗ್ರಾಮಗಳನ್ನು ಕೆಂಪೇಗೌಡ ವಾರ್ಡ ನಂ-01ಕ್ಕೆ ಸೇರ್ಪಡೆಗೊಳಿಸಲಾಗಿರುತ್ತದೆ. ಹಾಗೂ ಚೌಡೇಶ್ವರಿ ವಾರ್ಡ್ ನಂ-02ಕ್ಕೆ ಯಾವುದೇ ಹಳ್ಳಿಗಳು ಒಳಪಡುವುದಿಲ್ಲ. ಹಾಗೂ ಅಟ್ಟೂರು ವಾರ್ಡ ನಂ-03ರಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಆದುದರಿಂದ ವಿಷಯದ ಸಂಖ್ಯೆ:108/2023-24 ದಿನಾಂಕ:27-11-2023 ರಂದು ಅನುಮೋದನೆಗೊಂಡಿರುವ ಕ್ರೀಯಾ ಯೋಜನೆಯನ್ನು ಈ ಕೆಳಕಂಡಂತೆ ಪುನಃ ಮಾರ್ಪಾಡುಗೊಳಿಸಿ ಮಾರ್ಪಾಡಿತ ಕ್ರೀಯಾ ಯೋಜನೆಯನ್ನು ಈ ಕೆಳಕಂಡಂತೆ ತಯಾರಿಸಿದೆ.

ತಯಾರಿಸಿದೆ.

e of Work	Est. Amount in Lakhs
Erection of Pumpset, ell at Srinivasapura l of yelahanka Sub	20.00
ion of Pumpset, Nagenahalli, eas in ward	50.00
Pumpset, ttahalli, reas in town	80.00
	150.00

08/2023-24
ಧಿಕೃತವಾಗಿ
ಹಾಗೂ
ಯಮ
ನರ್
ದೆ

ವಾರ್ಡ್ ನಂ	ಹಳ್ಳಿಗಳು	ಕಾಮಗಾರಿ ಹೆಸರು	ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ	ಮಾರ್ಪಾಡಿತ ಕಾಮಗಾರಿ ಹೆಸರು	ಅಂದಾಜು ಮೊತ್ತ ರೂ.ಲಕ್ಷಗಳಲ್ಲಿ
1	Srinivasapura	Drilling of Borewell and Erection of Pumpset, Electrification to Borewell at Srinivasapura village area in ward no -01 of yelahanka Sub division.	20.00	Drilling of Borewell and Erection of Pumpset, Electrification to Borewell at Nagenahalli, Harohalli, Kenchenahalli village areas in ward no -01 of yelahanka Sub division,	70.00
2	Nagenahalli, Harohalli, Kenchenahalli	Drilling of Borewell and Erection of Pumpset, Electrification to Borewell at Nagenahalli, Harohalli, Kenchenahalli village areas in ward no -02 of yelahanka Sub division,	50.00	–	–
3	Chikkabettahalli, doddabettahalli and Ananthapura	Drilling of Borewell and Erection of Pumpset, Electrification to Borewell at Chikkabettahalli, Doddabettahalli and ananthapura village areas in Attur ward no -03 of yelahanka Satellite town sub division	80.00	Drilling of Borewell and Erection of Pumpset, Electritication to Borewell at Chikkabettahalli, Doddabettahalli and ananthapura village areas in Attur ward no -03 of yelahanka Satellite town sub division	80.00
		ಒಟ್ಟು ಮೊತ್ತ	150.00		150.00

1. ಪ್ರಸ್ತಾಪಿತ ಕಾಮಗಾರಿಗಳ ಸ್ಥಳ ಪರಿವೀಕ್ಷಣೆ ಮಾಡಿ ಕಾಮಗಾರಿ ಅವಶ್ಯಕತೆ ಬಗ್ಗೆ ಹಾಗೂ ಸದರಿ ಕಾಮಗಾರಿಯನ್ನು ಪಾಲಿಕೆಯ ಹಿಂದಿನ ಆಯವ್ಯಯಗಳಲ್ಲಿ / ಅನುದಾನಗಳಲ್ಲಿ ಕೈಗೊಂಡಿಲ್ಲದೇ ಇರುವ ಮತ್ತು ಪುನರವರ್ತನೆಯಾಗದೇ ಇರುವುದನ್ನು ಖಚಿತಪಡಿಸಿಕೊಳ್ಳುವುದು.
2. ಕಾಮಗಾರಿಯನ್ನು ಅನುಷ್ಠಾನಗೊಳಿಸುವ ಪೂರ್ವದಲ್ಲಿ ಆಯುಕ್ತರವರ ಕಛೇರಿ ಆಧೇಶ ಸಂಖ್ಯೆ ಮುಲೆಅ/ ಆಯವ್ಯ/2019-20/ಪಿ.ಆರ್/11/2018-19 ದಿನಾಂಕ: 12-6-2019 ಮತ್ತು ಆಯುಕ್ತರವರ ಅಂತರಿಕ ಕಛೇರಿ ಟಿಪ್ಪಣಿ ಸಂಖ್ಯೆ ಬಿ.ಬಿಎಂ.ಪಿ/ ಆ/ ಪಿ.ಆರ್/ 5287/ 2019-20 ದಿನಾಂಕ: 5-11-2019 ಮತ್ತು ಬಿ.ಬಿ.ಎಂ.ಪಿ/ಪಿ/ಪಿ.ಆರ್/6166/2019-20 ದಿನಾಂಕ: 13-12-2019 ರಲ್ಲಿನ ನಿರ್ದೇಶನಗಳನ್ನು / ಪ್ರಕ್ರಿಯೆಗಳನ್ನು ಅನುಸರಿಸತಕ್ಕದ್ದು.
3. ಕಾಮಗಾರಿಗೂ ಮುನ್ನ ಹಾಗೂ ನಂತರದ ಜಿ.ಪಿ.ಎಸ್ ಯುಳ್ಳ ಛಾಯಾ ಚಿತ್ರಗಳನ್ನು ಸಲ್ಲಿಸತಕ್ಕದ್ದು.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ಯಲಹಂಕ ವಿಭಾಗಕ್ಕೆ ಒಳಪಡುವ 110 ಹಳ್ಳಿಗಳ ಪ್ರದೇಶಗಳಲ್ಲಿ ಕೊಳವೆ ಬಾವಿಗಳನ್ನು ಕೊರೆಸಲು ಒಟ್ಟು ಮೊತ್ತ ರೂ.150.00 ಲಕ್ಷಗಳಿಗೆ ಅನುಮೊದನೆಗೊಂಡ ವಿಷಯದ ಸಂಖ್ಯೆ 108/2023-24 ದಿನಾಂಕ:27-11-2023 ರ ಕ್ರಿಯಾ ಯೋಜನೆಯ ಈ ಪ್ರಸ್ತಾವನೆಯನ್ನು ಮಾರ್ಪಾಡುಗೊಳಿಸಿ, ಮಾರ್ಪಾಡಿತ ಕ್ರಿಯಾಯೋಜನೆಗೆ ಅನುಮೋದನೆ ಕೋರುತ್ತಾ, ವಾರ್ಡ್ ಮಟ್ಟದ ಲೋಕೋಪಯೋಗಿ ಕಾಮಗಾರಿ, ನಗರ ಯೋಜನೆ ಹಾಗೂ ಮೂಲ ಸೌಕರ್ಯ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರವನ್ನು ಚಲಾಯಿಸಿ ತೀರ್ಮಾನಕ್ಕಾಗಿ ಆಡಳಿತಗಾರರ ಮುಂದೆ ಮಂಡಿಸಿರುವ ವಲಯ ಆಯುಕ್ತರು (ಯಲಹಂಕ) ರವರ ದಿನಾಂಕ:02-01-2024ರ ಟಿಪ್ಪಣಿ.

ತೀರ್ಮಾನ: ವಲಯ ಆಯುಕ್ತರು (ಯಲಹಂಕ) ರವರ ದಿನಾಂಕ:02-01-2024ರ ಟಿಪ್ಪಣಿಯನ್ನು ಒಪ್ಪಿದೆ.

(ರಾಕೇಶ್ ಸಿಂಗ್)
ಆಡಳಿತಗಾರರು